**ಸಿ.ಸಿ.ನಂ.428/2024**
**ಪಿ.ಡಬ್ಲ್ಯೂ.1**

**ಸಾಕ್ಷಿಗೆ ದಿನಾಂಕ : 13-11-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಶ್ರೀ.ಎಚ್.ವಾಯ್.ಪಿ ವಕೀಲರಿಂದ ಆರೋಪಿ ಪರವಾಗಿ**

1.ನಾನು 7 ನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ನಾನು ಲೋಕಾಪೂರದ ಖಾಯಂ ನಿವಾಸಿ. ಆರೋಪಿತ ಜಾಡರ - ಅರಳಿಕಟ್ಟಿ ನಿವಾಸಿ ಎಂದರೆ ಸರಿ. ನಮ್ಮ ಮನೆಯಲ್ಲಿ ನಾವು 12 ಜನ ವಾಸಿಸುತ್ತೇವೆ. ನನಗೆ ಒಬ್ಬ ಸಹೋದರನಿದ್ದಾನೆ. ನಿಮ್ಮ ಮನೆಯ ಹಿರಿತನ ನೀವೇ ಮಾಡುತ್ತೀರಿ ಎಂದರೆ ಸರಿ. ಆರೋಪಿತನ ಪರಿಚಯ ನಿಮಗೆ ಯಾರು ಮಾಡಿಕೊಟ್ಟರು ಎಂದರೆ 20 ವರ್ಷಗಳಿಂದ ಆತ ನನ್ನ ಗೆಳೆಯ ಎಂದು ನುಡಿಯುತ್ತಾರೆ. ಆರೋಪಿತ ಯಾರೊಂದಿಗೆ ವಾಸಿಸುತ್ತಾನೆ ಎಂದರೆ ಆತ ತನ್ನ ಇಬ್ಬರು ಸಹೋದರರೊಂದಿಗೆ ಇದ್ದು ಅವರ ಜೊತೆಗೆ ವಾಸಿಸುತ್ತಾನೆ ಎಂದು ಹೇಳುತ್ತಾರೆ. ಆರೋಪಿತನ ಆಸ್ತಿಗಳ ಬಗ್ಗೆ ಮಾಹಿತಿ ಇದೆಯಾ ಎಂದರೆ ಅವರ ಮನೆ ಇದ್ದು, ಪಾನ ಶಾಪ್, ಸೈಕಲ ಅಂಗಡಿ ಮತ್ತು 2 ಟಿಪ್ಪರಗಳು ಮಾಲೀಕತ್ವದ್ದು ಇವೆ. ವ್ಯವಸಾಯದ ಜಮೀನುಗಳು ಎಷ್ಟು ಇವೆ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿತನ ಹೆಸರಿನಲ್ಲಿ 10 ಏಕರೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ.

2.ನನಗೆ 3 ಜನ ಮಕ್ಕಳು. ನನ್ನ ಮಕ್ಕಳು ಸರಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಾರೆ. ನಾನು ಖಾನಾವಳಿ ನಡೆಸುತ್ತೇನೆ, ವಾಟರ ಫಿಲ್ಟರ ಮಾರಾಟ ಮಾಡುತ್ತೇನೆ, ಮೊಬೈಲ ಅಂಗಡಿ ಇದೆ. ನನ್ನ ಯಾವುದೇ ವ್ಯವಸಾಯದ ಜಮೀನು ಇಲ್ಲ. ಸದರಿ ಮೇಲೆ ಹೇಳಿದ ಅಂಗಡಿಗಳನ್ನು ನಾನು ಮತ್ತು ನನ್ನ ಸಹೋದರರು ನೋಡುತ್ತೇವೆ. ಕೋಲ್ಡ್ರಿಂಕ್ಸ ಅಂಗಡಿ ನಡೆಸಲು ಪರವಾನಿಗೆ ಇದೆ. ವರ್ಷದಲ್ಲಿ 3 ರಿಂದ 4 ತಿಂಗಳು ಮಾತ್ರ ಕೋಲ್ಡ್ರಿಂಗ್ಸ ಅಂಗಡಿಗೆ ಸೀಜನ ಇದೆ ಎಂದರೆ ಸರಿ. ನಿಮ್ಮ ಖಾನಾವಳಿ ಹೆಸರು ಏನು ಎಂದರೆ ದುರ್ಗಾ ಖಾನಾವಳಿ ಎಂದು ಹೇಳುತ್ತಾರೆ.

3.ಆರೋಪಿತನಿಗೆ ಯಾವ ರೀತಿ ಅಡಚಣೆ ಇತ್ತು ಎಂದು ನಿಮ್ಮ ದೂರಿನಲ್ಲಿ ಬರೆಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿತನೊಂದಿಗೆ ನಿಮ್ಮ ಬಳಿ ಹಣ ಕೇಳಲು ಯಾರು ಬಂದಿದ್ದರು ಎಂದರೆ ಸಾಕ್ಷಿಯು ಅಶೋಕ ಪೂಜಾರಿ, ರಾಮಣ್ಣ ಕನಕನಪ್ಪನವರ, ತಿಪ್ಪಣ್ಣ ಆಡಿನ್ನವರ ಅವರು ಬಂದಿದ್ದರು ಎಂದು ಹೇಳುತ್ತಾರೆ. ದೂರಿನಲ್ಲಿ ಆ ರೀತಿ ಇಬ್ಬರು ವ್ಯಕ್ತಿಗಳು ಇದ್ದರು ಎಂದು ನಮೂದಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆರೋಪಿತ ನನಗೆ 1 ಲಕ್ಷ ರೂಪಾಯಿ ಹಣ ಕೇಳಿದ್ದನು. ನಾನು ಆರೋಪಿತನಿಗೆ 1 ಲಕ್ಷ ರೂಪಾಯಿಯನ್ನು ಆರ್.ಟಿ.ಜಿ.ಎಸ್ ಮೂಲಕ ನೀಡಿದ್ದೇನೆ. ಆ ಸಮಯದಲ್ಲಿ ಭದ್ರತೆಗಾಗಿ ನೀವು ಆರೋಪಿತನಿಗೆ ಒಂದು ಚೆಕ ನೀಡಲು ಕೇಳಿದಿರಿ ಎಂದರೆ ಸರಿಯಲ್ಲ. ಆರೋಪಿತ 2 ತಿಂಗಳಲ್ಲಿ ಸದರಿ ಮೊತ್ತ ಹಿಂದಿರುಗಿಸುತ್ತೇನೆ ಎಂದು ಹೇಳಿದ್ದನು. 2 ತಿಂಗಳ ನಂತರ ನೀವು ಹಣ ಕೇಳಲು ಹೋದಾಗ ಆರೋಪಿತ ನಿಮಗೆ 80 ಸಾವಿರ ರೂಪಾಯಿ ನೀಡಿದ ಎಂದರೆ ಸರಿಯಲ್ಲ. ಉಳಿದ 20 ಸಾವಿರ ರೂಪಾಯಿ ನೀಡಿದ ನಂತರ ಚೆಕ ಹಿಂದಿರುಗಿಸುವಂತೆ ಕೇಳಿಕೊಂಡರು ಎಂದರೆ ಸರಿಯಲ್ಲ. ಆ ರೀತಿ ನಿಮ್ಮ ಪ್ರಕಾರ 1 ಲಕ್ಷ ನೀಡಿದ ನಂತರ ಮತ್ತೆ ಯಾವುದಾದರೂ ಹಣಕಾಸಿನ ವ್ಯವಹಾರ ಆರೋಪಿತನೊಂದಿಗೆ ಮಾಡಿದ್ದೀರಾ ಎಂದರೆ ಮತ್ತೆ 3 ಲಕ್ಷ 50 ಸಾವಿರ ಬೇಕು ಎಂದು ಕೇಳಿದ್ದು, ಕೈಗಡ ಪತ್ರ ಬರೆಸಿಕೊಂಡು ನೀಡಿದ್ದೆ ಎಂದು ಹೇಳುತ್ತಾರೆ. ಆ ರೀತಿ 3 ಲಕ್ಷ 50 ಸಾವಿರ ರೂಪಾಯಿ ನಿಮ್ಮ ಬಳಿ ಮತ್ತೆ ತೆಗೆದುಕೊಂಡು ಹೋದರು ಎಂದರೆ ಸರಿಯಲ್ಲ. ನಿಮ್ಮ ದಿನನಿತ್ಯದ ಖರ್ಚು ವೆಚ್ಚ ಬರೆದು ಇಟ್ಟಿರುತ್ತೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ದಿನಕ್ಕೆ ಎಷ್ಟು ವ್ಯಾಪಾರ ಆಗುತ್ತದೆ ಎಂದರೆ ಖಾನಾವಳಿಯಲ್ಲಿ ದಿನಕ್ಕೆ 3 ಸಾವಿರ ವ್ಯಾಪಾರ ಇದೆ ಎಂದು ಹೇಳುತ್ತಾರೆ. ನಿಮ್ಮ ಆದಾಯದ ಮೂಲದ ಬಗ್ಗೆ ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಆ ರೀತಿ ನಿಮಗೆ ಆದಾಯದ ಮೂಲಗಳು ಇವೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತನಿಗೆ ನೀವು ಹೇಳಿದಂತೆ ಹಣ ನೀಡುವ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ.

4.ಆರೋಪಿತ ನಿಮ್ಮ ಬಳಿ ನೀವು ಹೇಳಿದಂತೆ ಯಾವುದೇ ಸಾಲ ಮಾಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿನ ಎಲ್ಲಾ ದಾಖಲಾತಿಗಳನ್ನು ನೀವು ಸೃಷ್ಠಿಸಿ ಹಾಜರಪಡಿಸಿದ್ದೀರಿ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಮತ್ತು ಹಾಜರಪಡಿಸಿದ ದಾಖಲಾತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನೀವು 2023 ರಲ್ಲಿ ಆರೋಪಿತ ಹಣ ಕೇಳಿದ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 2023 ರಲ್ಲಿ ಆರೋಪಿತ ನಿಮ್ಮೊಂದಿಗೆ ಯಾವುದೇ ಹಣದ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ನಿಮಗೆ ಆರೋಪಿತ ಕೇವಲ 20 ಸಾವಿರ ಕೊಡುವುದು ಬಾಕಿ ಇದ್ದು ಅದನ್ನು ಕೊಡಲು ಆತ ತಯಾರಿದ್ದಾನೆ ಎಂದರೆ ಸರಿಯಲ್ಲ. ನೀವು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿದ ಎಲ್ಲಾ ವಿಷಯ ಸುಳ್ಳು ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ